ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 09–07–2007ರಂದು 1ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 34 ಪ್ರಶ್ನೆಗಳ ಪೈಕಿ 22 ಉತ್ತರಗಳನ್ನು ಮತ್ತು ದಿನಾಂಕ 10–07–2007 ರಂದು 2ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 56 ಪ್ರಶ್ನೆಗಳ ಪೈಕಿ 26 ಸದನದಲ್ಲಿ ಮಂಡಿಸುತ್ತೇನೆ.

ಸಭಾಧ್ಯಕ್ಷರು: – ಮಂಡಿಸಲಾಯಿತು.

(ಅನುಬಂಧ –1)

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು.

1) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿ) : –

ವಿಚಾರಣಾ ಆಯೋಗದ ಕಾಯ್ದೆ 1952ರ ಕಲಂ 3(4)ರ ಅನ್ವಯ:

1. ನ್ಯಾಯಮೂರ್ತಿ ಶ್ರೀ ಬಿ.ಪದ್ಮರಾಜ್ ವಿಚಾರಣಾ ಆಯೋಗ, ಬೆಂಗಳೂರು ಇವರ ವರದಿ.

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ:

1. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ.

3. ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2005–06 ಮತ್ತು 2006–07ನೇ ಸಾಲಿನ ವಾರ್ಷಿಕ ವರದಿ.